<u>1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>

<u>S.C.68/2017</u>

ದಿಃ 03.12.2022
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-11 Pw-11

| | | |
|---|---|---|
| ಹೆಸರು | ಃ | ಭಾಗ್ಯಮ್ಮ |
| ಗಂಡನ ಹೆಸರು | ಃ | ನರಸಿಂಹಯ್ಯ |
| ವಯಸ್ಸು | ಃ | 45 ವರ್ಷ |
| ಉದ್ಯೋಗ | ಃ | ಕ್ಷೌರಿಕರು |
| ವಾಸಸ್ಥಳ | ಃ | ಮಾಗಡಿ |

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

1. ನನ್ನ ಮನೆ ಮಾಗಡಿ ಪಟ್ಟಣದಲ್ಲಿನ ಮಸೀದಿಯ ಪಕ್ಕದಲ್ಲಿರುವ ಸುಣ್ಣಕಲ್ಲು ಬೀದಿಯಲ್ಲಿ ಇರುತ್ತದೆ.

2. ನೂರುಲ್ಲಾ ಈತನ ಮಗಳು ಬಿಬಿ ಆಯೀಷಾ ನನಗೆ ಗೊತ್ತು.

3. ಅವಳು ಕಾಲವಾಗಿರುತ್ತಾಳೆ.

4. ಈಗ ಸುಮಾರು 6 ವರ್ಷಗಳ ಹಿಂದೆ ರಾತ್ರಿ 9 ಗಂಟೆ ಸಮಯದಲ್ಲಿ ನಾನು ಮನೆಯ ಒಳಗೆ ಕುಳಿತಿದ್ದಾಗ ಹೊರಗೆ ಸದರಿ ಬಿಬಿ ಆಯೀಷಾ ಇವಳನ್ನು ನೋಡಿ ನಾಯಿ ಬೊಗಳುತ್ತಿದ್ದುದರಿಂದ, ನಾನು ಹೊರಗೆ ಬಂದು ನೋಡಿರುತ್ತೇನೆ.

5. ಆಗ ಸದರಿ ನಾಯಿಯನ್ನು ನಾನು ಓಡಿಸಿ, ಸದರಿ ಹುಡುಗಿಗೆ ಮನೆಗೆ ಹೋಗು ಎಂದು ಹೇಳಿರುತ್ತೇನೆ.

6. ನಂತರ, ಸದರಿ ಹುಡುಗಿ ಮನೆಗೆ ಹೋದಳೋ ಇಲ್ಲವೋ ಎಂದು ನಾನು ನೋಡಿರುವುದಿಲ್ಲ.

7. ನಾನು ನನ್ನ ಮನೆಯ ಒಳಗೆ ಹೋಗಿರುತ್ತೇನೆ.

ಪಾಟೀ ಸವಾಲುಃ ಶ್ರೀ. ಎಂ.ಎಂ., ವಕೀಲರಿಂದ ಆರೋಪಿಗಳ ಪರವಾಗಿಃ

8. ನಮ್ಮ ಮನೆಯ ಎದುರಿಗೆ ಸಾಲಿನಲ್ಲಿ ಸ್ವಲ್ಪ ದೂರದಲ್ಲಿ ಬಿಬಿ ಆಯೀಷಾ ಇವಳ ತಂದೆಯ ಅಂಗಡಿ ಇರುತ್ತದೆ.

9. ಸದರಿ ಅಂಗಡಿಯಲ್ಲಿ ಬಿಬಿ ಆಯೀಷಾ ಇವಳ ತಂದೆ ತಾಯಿ ರಾತ್ರಿ 9.30-10.00 ಗಂಟೆವರೆಗೂ ಇರುತ್ತಾರೆ.

10. ಆದಿನ ಸದರಿ ಅಂಗಡಿಯಲ್ಲಿ ಬಿಬಿ ಆಯೀಷಾ ಇವಳ ತಾಯಿ ಇದ್ದರೋ, ತಂದೆ ಇದ್ದರೋ ಎಂದು ನಾನು ನೋಡಿರುವುದಿಲ್ಲ.

11. ನಮ್ಮ ಮನೆಯ ಮುಂದೆ ಇರುವ ರಸ್ತೆಯಲ್ಲಿ ಸಾಕಷ್ಟು ಜನಸಂದಣಿ ಇರುತ್ತದೆ ಎನ್ನುವುದು ಸರಿ.

12. ನಾಯಿಗಳು ಬೊಗಳುವ ಸಮಯದಲ್ಲಿ ಬಿಬಿ ಆಯೀಷಾ ಒಬ್ಬಳೇ ಇದ್ದಳು, ಅವಳೊಂದಿಗೆ ಬೇರೆ ಯಾರೂ ಇರಲಿಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಜಿ ಡಿ ಮಹಾವರ್ಕರ್)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.